
ತರಳಬಾಳು

ಕೃಷಿ ವಿಜ್ಞಾನ ಕೇಂದ್ರ

ದಾವಣಗೆರೆ

# ಸಾವಯವ ಕೃಷಿಕರ ಮೀನು ಕೃಷಿ




ಡಾ|| ದೇವರಾಜ ಟಿ. ಎನ್.

ಕಾರ್ಯಕ್ರಮ ಸಂಯೋಜಕರು



ಜನವರಿ– 2014

"ಆತ್ಮ" (ATMA) ಯೋಜನೆ ಅಡಿಯಲ್ಲಿ ಮುದ್ರಿತ

ತರಳಬಾಳು ಗ್ರಾಮೀಣಾಭಿವೃದ್ಧಿ ಸಂಸ್ಥೆ,

ಸಿರಿಗೆರೆ.

# ಸಾವಯವ ಕೃಷಿಕರ ಮೀನು ಕೃಷಿ



ಅನ್ನ ಬ್ರಹ್ಮನನ್ನೆ ಸೃಷ್ಟಿಸುವ ಕೃಷಿ ಕ್ಷೇತ್ರ ಕಾಯಕ ಭಲೇ ಆಸಕ್ತಿದಾಯಕ. ಪ್ರಸ್ತುತ ಭೂಮಿ ಆಧಾರಿತ ಆಹಾರದ ಉತ್ಪಾದನೆ ಸಾಲದೇ, ನೀರಿನಿಂದ ಆಹಾರವನ್ನು ಉತ್ಪಾದಿಸುವ ತಂತ್ರಜ್ಞಾನಗಳು ಗಮನ ಸೆಳೆಯುತ್ತಿವೆ. ಅದರಲ್ಲೂ ಜಲಕೃಷಿಯ ಮೂಲಕ ಅಹಾರ ಸಂಪಾದನೆ ಮಾನವನಿಗೆ ಶತಮಾನಗಳಿಂದ ಪರಿಚಿತವಾದುದೆ. ಜಲಕೃಷಿಯಲ್ಲಿ ಮೀನು ಬಹು ಮುಖ್ಯವಾದ ಭಾಗ, ಮೀನುಗಾರಿಕೆ ಕ್ಷೇತ್ರವು ಆಹಾರ ಮತ್ತು ಉದ್ಯೋಗದ ಜೊತೆಗೆ ಆದಾಯದ ಮೂಲವಾಗಿಯು ಬೆಳೆದು ನಿಂತಿದೆ. ದೇಶದಲ್ಲಿ ದೊರೆಯತ್ತಿರುವ ಜಲಸಂಪನ್ಮೂಲಗಳ ಸಾಮರ್ಥ್ಯ ಬಹಳ ದೊಡ್ಡದಿದೆ. ನಮ್ಮ ಜಲ ಸಂಪನ್ಮೂಲಗಳಲ್ಲಿ ಮುಖ್ಯವಾಗಿ 27359 ಕಿಲೋಮೀಟರ್ ನದಿಗಳು, 16 ಲಕ್ಷ ಹೆಕ್ಟೇರ್ ಕೆರೆಗಳು, ಹೊಂಡಗಳು 29 ಲಕ್ಷ ಹೆಕ್ಟೇರ್, ಸರೋವರಗಳು ಮತ್ತು ಜಲಾಶಯಗಳು 1,12,654 ಕಿಲೋಮೀಟರ್ ಕಾಲುವೆ ಮತ್ತು ನೀರಾವರಿ ಕಾಲುವೆಗಳು ಮತ್ತು 2.23 ದಶಲಕ್ಷ ಚದುರ ಕಿ.ಮೀ ಸಮುದ್ರದ ವಿಸ್ತೀರ್ಣ ಮತ್ತು 8500 ಕಿಲೋಮೀಟರ್ ಕರಾವಳಿ ತೀರ ಪ್ರದೇಶವಿದ್ದರೂ ಅವುಗಳ ಸಂಪೂರ್ಣ ಪ್ರಯೋಜನ ಪಡೆಯಲು ನಮಗಿನ್ನೂ ಸಾಧ್ಯವಾಗಿಲ್ಲ.

ನಮ್ಮ ರಾಜ್ಯದಲ್ಲಿ ಜಲಕೃಷಿಗೆ 50 ಕೋಟಿ ಮೀನಿನ ಮರಿಗಳ ಬೇಡಿಕೆ ಇದ್ದು, ಈಗಲೂ 10 ಕೋಟಿ ಮೀನುಮರಿಗಳ ಕೊರತೆಯನ್ನು ಪೂರೈಸಲು ಪ್ರಯತ್ನಗಳು ಸಾಗಿವೆ. ನಮ್ಮ ದಾವಣಗೆರೆ ಜಿಲ್ಲೆಗೆ 1.5 ಕೋಟಿ ಮೀನು ಮರಿ ಬೇಡಿಕೆಯಿದ್ದು 25 ರಿಂದ 30 ಲಕ್ಷ ಮೀನುಮರಿಗಳು ನಮ್ಮ ರಾಜ್ಯದಿಂದ ಪೂರೈಕೆಯಾಗುತ್ತಿದೆ. ಉಳಿದ ಬೇಡಿಕೆಯ ಪೂರೈಕೆ ಹೊರ ರಾಜ್ಯ (ಆಂಧ್ರಪ್ರದೇಶ)ಗಳಿಂದ ಆಗುತ್ತಿದೆ. ನಮ್ಮ ಜಿಲ್ಲೆಯಲ್ಲಿ 16.000 ಮೆಟ್ರಿಕ್ ಟನ್‌ಗಳಷ್ಟು ಮೀನಿನ ಉತ್ಪಾದನೆ ಇದೆ (2010). 9627 ಹೆ. ಕೆರೆಗಳು ಮತ್ತು 3624 ಹೆ. ಜಲಾಶಯಗಳ ನೀರಿನ ಸಂಪನ್ಮೂಲ ಸೌಲಭ್ಯಗಳಿವೆ. ಇವುಗಳ ಜೊತೆಗೆ 1 ಲಕ್ಷ ಹೆಕ್ಟೇರ್‌ಗಿಂತಲೂ ಹೆಚ್ಚ ಪ್ರದೇಶದಲ್ಲಿ ಭತ್ತ ಬೆಳೆಯುತ್ತಾರೆ. ಈ ಅವಕಾಶಗಳನ್ನೆಲ್ಲ ಮೀನು ಕೃಷಿಗೆ ಸದ್ಬಳಕೆ ಮಾಡಿಕೊಂಡಲ್ಲಿ ದೊಡ್ಡ ಸಾಧನೆ ಸಾಧ್ಯವಿದೆ.

ದಾವಣಗೆರೆ ಜಿಲ್ಲೆಯಲ್ಲಿ ಕಳೆದ ಕೆಲವು ವರ್ಷಗಳಿಂದ ಕೊಳಗಳಲ್ಲಿ ಮೀನು ಕೃಷಿ ಮಾಡಲು ಹೆಚ್ಚಿನ ಸಂಖ್ಯೆಯಲ್ಲಿ ರೈತರು ಮೀನು ಸಾಕಾಣಿಕೆಗೆ ಮುಂದಾಗುತ್ತಿದ್ದು, ಅಲ್ಲಲ್ಲಿ ಉತ್ತೇಜನಕಾರಿ ಪ್ರಯೋಗಗಳು ರೈತರಿಂದಾಗಿವೆ. ದಾವಣಗೆರೆ ತಾಲ್ಲೂಕಿನ ನಾಗರಕಟ್ಟೆ ಗ್ರಾಮದ ಮರುಳಸಿದ್ದಪ್ಪನವರ ಮೀನು ಕೃಷಿ ಸ್ಫೂರ್ತಿದಾಯಕವಾಗಿದೆ. ಸಾವಯವ ಕೃಷಿಕರಾಗಿದ್ದು ಭತ್ತ, ಕಬ್ಬು ಬೆಳೆಗಳನ್ನು ಸಾವಯವ ಪದ್ಧತಿಯಲ್ಲಿ ಬೆಳೆಯುತ್ತಿರುವರು. ಎರೆಹುಳು ಗೊಬ್ಬರ, ಗೋಬರ್ ಗ್ಯಾಸ್, ಕಣ, ಹೈನುಗಾರಿಕೆ, ತರಕಾರಿಗಳು ಹೀಗೆ ಹಲವಾರು ಚಟುವಟಿಕೆಗಳಲ್ಲಿ ಸಂಪೂರ್ಣವಾಗಿ ತೊಡಗಿಸಿಕೊಂಡು ಸಕ್ರಿಯವಾಗಿರುವಂಥವರು.

ಮರುಳಸಿದ್ದಪ್ಪನವರು ನೀರಿನ ಸಂಗ್ರಹಣೆಗೆ ಒಂದು ಮಣ್ಣಿನ ಹೊಂಡವನ್ನು ಮನೆಗೆ ಸಮೀಪದಲ್ಲಿ ನಿರ್ಮಿಸಿಕೊಂಡಿದ್ದರು. ನಮ್ಮ ಭೇಟಿಯ ಸಮಯದಲ್ಲಿ ಹೊಂಡ ವೀಕ್ಷಿಸಿದ ಬಳಿಕ ಮಿಶ್ರ ಮೀನು ಸಾಕಾಣಿಕೆ ಮಾಡುವ ಬಗ್ಗೆ ಅವರೊಂದಿಗೆ ಪ್ರಸ್ತಾಪಿಸಿದೆವು. ಅವರು ತಾನು ಮೀನು ಮುಟ್ಟಿಲ್ಲ, ತಿಂದಿಲ್ಲ, ಹಾಗಾಗಿ ಮೀನು ಬೆಳೆಯೋದು ಸಾಧ್ಯವೇ ಎಂದರು. ಖಂಡಿತಾ ಸಾಧ್ಯವೆಂದ ನಾವು ನಮ್ಮ ಕೃಷಿ ವಿಜ್ಞಾನ ಕೇಂದ್ರದ ಮೂಲಕ ಅಗತ್ಯ ತರಬೇತಿಗಳನ್ನು ಹಂತ ಹಂತವಾಗಿ ನೀಡಿದೆವು. ಬಹಳ ಆಸಕ್ತಿಯಿಂದ ಪತ್ನಿ ಸಮೇತರಾಗಿ ಮರುಳಸಿದ್ದಪ್ಪನವರು ಮೀನು ಕೃಷಿಯ ಮೂಲಭೂತ ತತ್ವಗಳನ್ನು ಮನನ ಮಾಡಿಕೊಂಡರು. ಇಡೀ ಕುಟುಂಬದ ಸದಸ್ಯರು ಈ ಹೊಸ ಪ್ರಯತ್ನಕ್ಕೆ ಇಂಬು ಕೊಟ್ಟರು.

ಮೀನು ಹೊಂಡದ ಸುತ್ತ ಅನೇಕ ತರಕಾರಿ ಗಿಡಗಳನ್ನು ನೆಟ್ಟು ಉಪಯೋಗ ಪಡೆದುಕೊಂಡರು. ಹೈನುಗಾರಿಕಾ ಘಟಕದಿಂದ ಗೋಬರ್ ಗ್ಯಾಸ್ ಉತ್ಪತ್ತಿ ಮಾಡಿಕೊಂಡು, ಅದರಿಂದ ಬಂದಂತಹ ಸ್ಲರ್ರಿಯನ್ನು ನೇರವಾಗಿ ಹೊಂಡಕ್ಕೆ ಹೋಗುವಂತೆ ವ್ಯವಸ್ಥೆ ಮಾಡಿಕೊಳ್ಳಲಾಗಿತ್ತು. ಕಾಲುವೆ ಮತ್ತು ಕೊಳವೆಬಾವಿ ನೀರು ಎರಡೂ ವ್ಯವಸ್ಥೆಗಳು ತಯಾರಿದ್ದವು. ಕೊಳವನ್ನು ಫಲವತ್ತೀಕರಿಸಿ, ಸುಣ್ಣ ಹಾಕಲಾಯ್ತು. ಸೂಕ್ತವಾಗಿ ಮಣ್ಣು ನೀರಿನ ರಸಸಾರ ಪರೀಕ್ಷೆ ಮಾಡಿಸಿ, ನಂತರ, ಬಲಿತ ಗೆಂಡೆ ಮೀನು ಮರಿಗಳನ್ನು ತಂದು ಕೊಳದಲ್ಲಿ ಬಿಟ್ಟೆವು. ಜೊತೆಗೆ, ಜಿಲ್ಲೆಯಲ್ಲೆ ಮೊದಲ ಬಾರಿಗೆ ಶಿವಮೊಗ್ಗದ ನವಿಲೆಯ ಒಳನಾಡು ಮೀನುಗಾರಿಕಾ ವಿಭಾಗ, ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು ಇವರ ಸಹಯೋಗದಲ್ಲಿ ಆಂಧ್ರಪ್ರದೇಶದಿಂದ ಪಂಗೇಶಿಯಸ್ ಎಂಬ ಜಾತಿಯ ಮೀನು ಮರಿಗಳನ್ನು ತರಿಸಿ, ಕೊಳಕ್ಕೆ ಬಿಡಲಾಯಿತು. ಜಿಲ್ಲೆಯಲ್ಲಿ ಮೊದಲ ಬಾರಿಗೆ ಗೆಂಡೆ ಮೀನುಗಳೊಂದಿಗೆ ಪಂಗೇಶಿಯಸ್ ಮಿಶ್ರ ಕೃಷಿಯ ಪಾತ್ಯಕ್ಷಿಕೆಯನ್ನು ಈ ಮೂಲಕ ಮಾಡಲಾಗಿದೆ.

15 ದಿನಗಳಿಗೊಮ್ಮೆ ಸಗಣಿ ಸ್ಲರ್ರಿಯನ್ನು ನೀಡುತ್ತಾ ಮೀನುಗಳಿಗೆ ಜೀವಂತ ಆಹಾರವಾದ ಫೈಟೋ ಮತ್ತು ಝೂ ಪ್ಲಾಂಕ್ಟನ್‌ಗಳನ್ನು ಹೇರಳವಾಗಿ ದೊರಕುವಂತೆ ಆಹಾರ ಪೂರೈಕೆ ಮಾಡಿದರು. ಮೊದಲ ಎರಡು ತಿಂಗಳುಗಳ ಕಾಲ ಒಟ್ಟು ಮೀನು ತೂಕದ ಶೇ. 6 ರಷ್ಟು ಮೇಲು ಆಹಾರವನ್ನು ಶೇಂಗಾಹಿಂಡಿ + ಅಕ್ಕಿ ತೌಡು (1:1 ಪ್ರಮಾಣದಲ್ಲಿ) ಜೊತೆಗೆ ವಿಟಮಿನ್+ಖನಿಜಾಂಶಗಳ ಪುಡಿಯನ್ನು (1%) ಬೇಯಿಸಿ, ಮುದ್ದೆ ಮಾಡಿ ರಂಧ್ರವುಳ್ಳ ಚೀಲಗಳಲ್ಲಿ ಹಾಕಿ ಮೀನುಗಳಿಗೆ ನೀಡಲಾಯಿತು. ನಂತರದ 4 ತಿಂಗಳುಗಳ ಕಾಲ ಶೇ 4 ಮತ್ತು ಕಡೆಯ 4 ತಿಂಗಳುಗಳ ಕಾಲ ಒಟ್ಟು ಮೀನುಗಳ ತೂಕದ ಶೇ. 3 ರಷ್ಟು ಮೇಲು ಆಹಾರವನ್ನು ನೀಡಲಾಯ್ತು.

ಆಗಾಗ್ಗೆ, ಹೊಂಡದಿಂದ ಕೃಷಿ ಚಟುವಟಿಕೆಗಳಿಗೆ ನೀರನ್ನು ಬಳಸುತಿದ್ದುದರಿಂದ 15 ದಿನಗಳಿಗೊಮ್ಮೆ 10–12% ರಷ್ಟು ನೀರನ್ನು ಸೇರಿಸಲಾಗುತ್ತಿತ್ತು. ಆಹಾರ ಸೇವನೆ, ಸರಾಗ ಈಜಾಟ, ತೊಂದರೆ ರಹಿತ ಉಸಿರಾಟಗಳ ಎಲ್ಲಾ ರೀತಿಯ ಅಂಶಗಳನ್ನು ಮೀನುಗಳಲ್ಲಿ ಗಮನಿಸಿ, ಖಚಿತ ಪಡಿಸಿಕೊಳ್ಳಲಾಗುತ್ತಿತ್ತು. 4 ತಿಂಗಳುಗಳಿಗೊಮ್ಮೆ ಒಟ್ಟು 3 ಬಾರಿ ತೂಕ ಮಾದರಿ ಪರೀಕ್ಷೆ ಮಾಡಲಾಯ್ತು. ಇದರಿಂದ ಮೀನುಗಳ ಬೆಳವಣಿಗೆಯನ್ನು ಖಾತ್ರಿ ಪಡಿಸಿಕೊಳ್ಳಲಾಯ್ತು. ಹೊಂಡದ ದಡದ ಸುತ್ತ ಬೆಳೆದಿದ್ದ ನೇಪಿಯರ್ ಹುಲ್ಲಿನ ಎಳೆ ಎಸಳುಗಳನ್ನು ಕೂಡ ಕತ್ತರಿಸಿ ಮೀನುಗಳಿಗೆ ಮೇವಾಗಿ ಹಾಕುತ್ತಿದ್ದರು.

ದಿನಕ್ಕೆರೆಡು ಬಾರಿ ಆಹಾರ ನೀಡುವ ಪ್ರಕ್ರಿಯನ್ನು ಶಿಸ್ತುಬದ್ಧವಾಗಿ ಮನೆಯ ಸದಸ್ಯರು ನಡೆಸಿದರು. ಹತ್ತು ತಿಂಗಳುಗಳ ಕೃಷಿ ಅವಧಿ ಮುಗಿದ ನಂತರ, ಕೊಯ್ಲಿಗೆ ಸಿದ್ಧತೆ ಮಾಡಿಕೊಳ್ಳಲಾಯಿತು. ಈ ಮಧ್ಯೆ ರಾಷ್ಟ್ರೀಯ ಮೀನು ಕೃಷಿಕರ ದಿನಾಚರಣೆ ಮತ್ತು ಕ್ಷೇತ್ರೋತ್ಸವಗಳನ್ನು ಹೊಂಡದ ಬದಿಯಲ್ಲಿ ಆಚರಿಸಲಾಯ್ತು. ಹಳ್ಳಿಯ ಯುವಕರೇ ಉತ್ಸಾಹದಿಂದ ಮುಂದೆಬಂದು ಮೀನುಗಳನ್ನು ಬಲೆಯ ಸಹಾಯದಿಂದ ಹಿಡಿದು,

ನೆರೆದ ಜನರಿಗೆ ತೋರಿಸಿದರು. ಇದೇ ಸಂದರ್ಭದಲ್ಲಿ ಡಾ. ವೈ. ವಿಶ್ವನಾಥ್ ಶೆಟ್ಟರು (ಸಹ, ಸಂಶೋಧನಾ ನಿರ್ದೇಶಕರು, ವಲಯ ಕೃಷಿ ಸಂಶೋಧನಾ ಕೇಂದ್ರ, ನವಿಲೆ, ಶಿವಮೊಗ್ಗ) ಮುಖ್ಯ ಅತಿಥಿಗಳಾಗಿದ್ದು, ಮೊದಲಿಗೆ ಮೀನುಗಳನ್ನು ತೂಕ ಮಾಡಿ, ಅಲ್ಲಿಯೇ ಮಾರಾಟ ಮಾಡಿಸಿದರು.

ದಾಸ್ತಾನು ಮಾಡಿದ ಶೇ. 60 ಮೀನುಗಳು ಬದುಕುಳಿದಿದ್ದವು. 10 ತಿಂಗಳ ಸಾಕಾಣಿಕೆ ಅವಧಿಯಲ್ಲಿ ಪ್ರತಿ ಮೀನು ಸರಾಸರಿ 1 ಕಿಲೋಗ್ರಾಂ ತೂಕವನ್ನು ಪಡೆದುಕೊಂಡಿದ್ದವು. ಸುತ್ತಲ ಗ್ರಾಮಗಳಿಂದ ಬಂದು ಭಾಗವಹಿಸಿದ್ದ ರೈತರುಗಳಿಗೆ ಮರುಳಸಿದ್ದಪ್ಪನವರ ಮೀನು ಸಾಕಣೆ ಕೃಷಿಯ ಬಹಳ ಪ್ರೇರೇಪಣೆಯಾಗಿತ್ತು. ಹೆಚ್ಚು ಶ್ರಮವಿಲ್ಲದೆ, ಕೇವಲ ಕಾಲು ಎಕರೆ ವಿಸ್ತೀರ್ಣದ ಹೊಂಡದಿಂದ ರೂ. 27,400/– ಗಳ ನಿವ್ವಳ ಆದಾಯ ಪಡೆದಿದ್ದು, ಸ್ವತಹ ಮರುಳಸಿದ್ದಪ್ಪನವರಿಗೆ ಆಶ್ಚರ್ಯವಾಗಿತ್ತು.

ಕೊಯ್ಲಿನ ನಂತರ, ಹೊಂಡದ ನೀರನ್ನು ತಮ್ಮ ಕೃಷಿ ಜಮೀನುಗಳಿಗೆ 'ಗೊಬ್ಬರದ ಟಾನಿಕ್' ಎಂದು ಹೆಸರಿಸಿ, ಹಾಯಿಸಿದರು. ಮೀನುಗಳನ್ನು ಮಾರಾಟ ಮಾಡುವುದು ಇವರಿಗೆ ಸಮಸ್ಯೆಯಾಗಲಿಲ್ಲ. ಏಕೆಂದರೆ, ಗ್ರಾಮದ ಯುವಕರೇ, ಅವುಗಳನ್ನು ಕೊಯ್ಲು ಮಾಡಿ, ಹೆಚ್ಚಿನ ಬೆಲೆಗೆ ಬೇರೆ ಗ್ರಾಮಗಳಲ್ಲಿ, ರೀಟೇಲ್ ರೂಪದಲ್ಲಿ ಮಾರಾಟ ಮಾಡಿ ಲಾಭಗಳಿಸಿದರು. ಪರಸ್ಪರ ಆರ್ಥಿಕ ಬೆಳವಣಿಗೆಗೆ ಹೀಗೆ ಮೀನು ಕೃಷಿಯ ತನ್ನದೇ ಆದ ರೀತಿಯಲ್ಲಿ ಸಹಾಯವಾಗಬಲ್ಲದು. ರಾಸಾಯನಿಕಗಳ ಕಡಿಮೆ ಬಳಕೆ ಮಾಡಿ ಆಹಾರವೊಂದನ್ನು ಹೇರಳವಾಗಿ ಉತ್ಪಾದನೆ ಮಾಡಲು ಮೀನು ಕೃಷಿಯಿಂದ ಸಾಧ್ಯವಾಗಿದ್ದು, ಸಾವಯವ ಕೃಷಿಕರಾದ ಶ್ರೀ ಮರುಳಸಿದ್ದಪ್ಪ (9945819244) ನವರಿಗೆ ಸಂಭ್ರಮ ತಂದಿತ್ತು. ಮುಖ್ಯ ಕೃಷಿಯೊಂದಿಗೆ ಉಪ ಕಸುಬಾಗಿ ಮೀನು ಕೃಷಿಯನ್ನು ಪಾಲಿಸಿದರೆ, ಸುಸ್ಥಿರ ಸಮಗ್ರ ಕೃಷಿಯ ಸಾಕಾರವು ಸುಲಭವಾಗುತ್ತದೆನ್ನುವುದು ಮರುಳಸಿದ್ದಪ್ಪನವರ ಪ್ರಯೋಗದ ಅನುಭವವಾಗಿದೆ.

| ಖರ್ಚುಗಳು | ಮೊತ್ತ |
|---|---|
| ಮೀನು ಮರಿಗಳು–ಒಟ್ಟು **1800**<br>(ಕಾಟ್ಲಾ–700, ರೋಹು–700, ಪಂಗೇಶಿಯಸ್–400) | ರೂ. **1,600–00** |
| ಮೇಲು ಆಹಾರ (ಶೇಂಗಾಹಿಂಡಿ, ಅಕ್ಕಿನುಚ್ಚು, ತೌಡು,<br>ಹಿಟ್ಟಿನ ಗಿರಿಣಿ ತ್ಯಾಜ್ಯ ಇತ್ಯಾದಿ–7 ಕ್ವಿಂಟಾಲ್) | ರೂ. **9,000–00** |
| ಕೂಲಿ ಮತ್ತು ಇತರೆ | ರೂ. **2,000–00** |
| ಒಟ್ಟು ಖರ್ಚು | ರೂ. **12,600–00** |
| ಆದಾಯ (**0.25** ಎಕರೆ ಹೊಂಡದಲ್ಲಿ ಮತ್ತು<br>**10** ತಿಂಗಳ ಕೃಷಿ ಅವಧಿಯ ನಂತರ)<br>ಕೊಯ್ಲಾದ ಮೀನಿನಿಂದ ಆದಾಯ –<br>ಮೀನು : **8** ಕ್ವಿಂಟಾಲ್ (ದರ ರೂ. **50**/ಕೆ.ಜಿ.) | ರೂ. **40,000–00** |
| ನಿವ್ವಳ ಲಾಭ | ರೂ. **27,400–00** |

**ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಬೇಕಾದ ವಿಳಾಸ :**

ಕಾರ್ಯಕ್ರಮ ಸಂಯೋಜಕರು

**ತರಳಬಾಳು ಕೃಷಿ ವಿಜ್ಞಾನ ಕೇಂದ್ರ, ದಾವಣಗೆರೆ.**

**ಫೋ : 08192–263462, ಫ್ಯಾಕ್ಸ್ : 08192–260969**

Email : dvgtkvk@yahoo.com